ಸ್ವಲ್ಪ ವಿರಾಮ ಬೇಕೆಂದು ಸಿನಿಮಾ ನೋಡಲು ಹೋಗುತ್ತಿದ್ದೆ. ಮನೆಯವರ ಪ್ರೋತ್ಸಾಹದ ಮಾತುಗಳು ನನ್ನನ್ನು ಗುರಿ ಮುಟ್ಟಲು ಮತ್ತಷ್ಟು ಸದೃಢಳನ್ನಾಗಿ ಮಾಡಿತು. ‘ಓದು, ನಿನ್ನಿಂದ ಎಲ್ಲವೂ ಸಾಧ್ಯ’ ಎಂದು ಹೇಳುವವರು ಬೇಕು. ರಾಮಾಯಣದಲ್ಲಿ ಆಂಜನೇಯನಿಗೆ ದೊರೆತ ಪ್ರೇರಕ ಶಕ್ತಿಯಂತೆ, ನಮಗೂ ಯಾರಾದರೂ ಹೇಳುತ್ತಿದ್ದರೆ ಪ್ರಯತ್ನದ ಬಗ್ಗೆ ಬೇಸರ ಮೂಡದೆ ಉತ್ಸಾಹ ಹೆಚ್ಚುತ್ತದೆ. ನನ್ನ ವಿಷಯದಲ್ಲಿ ಅದೆಲ್ಲ ಕೂಡಿ ಬಂದಿತ್ತು.

ಬೆಂಗಳೂರಿನ ವಿಜಯನಗರದಲ್ಲಿ ರೀಡಿಂಗ್ ರೂಂ ಇದೆ. ಅಲ್ಲೇ ನಾನು ಓದಿದ್ದು. ಅದು ಗ್ರಂಥಾಲಯದಂತೆ. ದಿನ ಬೆಳಿಗ್ಗೆ ಮನೆಯಲ್ಲಿ ವರ್ತಮಾನ ಪತ್ರಿಕೆಗಳನ್ನು ಓದಿ ಹೋಗುತ್ತಿದ್ದೆ. ಸಂಜೆ ಏಳು ಗಂಟೆಗೆ ಮನೆಗೆ ಬರ್ತಾ ಇದ್ದೆ. ಆರೋಗ್ಯ ಕೂಡ ಬಹಳ ಮುಖ್ಯ. ತೀರಾ ನಿದ್ದೆಗೆಟ್ಟು ಓದುವುದು ಒಳಿತಲ್ಲ. ಮನೆಗೆ ಬಂದ ಮೇಲೆ ಒಂದಿಷ್ಟು ಹೊತ್ತು ಅಮ್ಮನ ಜೊತೆ ಹರಟೆ ಹೊಡೆದು ಊಟ ಮಾಡಿ ಮಲಗುತ್ತಿದ್ದೆ. ವಾರಕ್ಕೆ ಇಷ್ಟು ಪಠ್ಯವನ್ನು ಓದಬೇಕು ಎಂದು ಟಾರ್ಗೆಟ್ ಇಟ್ಟುಕೊಳ್ಳುತ್ತಿದ್ದೆ.

ಪ್ರತಿದಿನ ಏಳರಿಂದ ಎಂಟು ಗಂಟೆ ಓದುತ್ತಿದ್ದೆ. ನಾನು ಮೂರನೇ ಯತ್ನದಲ್ಲಿ ಯಶಸ್ವಿಯಾಗಿದ್ದೇನೆ. ಮೊದಲ ಪ್ರಯತ್ನ 2016ರಲ್ಲಿ ಉದ್ದೇಶಿಸಿದಷ್ಟು ಓದಲಿಲ್ಲ. ಆಗ ಕೆಲಸ ಮಾಡುತ್ತಿದ್ದೆ. ಪೂರ್ವಭಾವಿ ಪರೀಕ್ಷೆಯೂ ಪಾಸಾಗಲಿಲ್ಲ. 2017ರಲ್ಲಿ ಪೂರ್ವಭಾವಿ ಪರೀಕ್ಷೆ ಪಾಸಾದೆ, ಮುಖ್ಯ ಪರೀಕ್ಷೆ ಆಗಲಿಲ್ಲ. 2018ರಲ್ಲಿ ಭಾರತೀಯ ಅರಣ್ಯ ಸೇವೆಯಲ್ಲಿ (ಐಎಫ್‌ಎಸ್) 50ನೇ ರ‍್ಯಾಂಕ್ (ಕರ್ನಾಟಕದಿಂದ ನಾನೊಬ್ಬಳೇ ಆಯ್ಕೆ ಆಗಿರುವುದು) ಐಎಎಸ್‌ನಲ್ಲಿ 45ನೇ ರ‍್ಯಾಂಕ್ ಪಡೆದಿದ್ದೇನೆ. ಎರಡು ಅವಕಾಶ ಇರುವುದರಿಂದ ನಾನು ಐಎಎಸ್ ಆಯ್ಕೆ ಮಾಡಿಕೊಳ್ಳುತ್ತೇನೆ.

**◆ ಪರೀಕ್ಷಾ ಸ್ವರೂಪ ಹೇಗಿರುತ್ತದೆ?**

ಪೂರ್ವಭಾವಿ, ಮುಖ್ಯ, ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ಹೀಗೆ ಮೂರು ಹಂತದಲ್ಲಿ ಪರೀಕ್ಷೆ ನಡೆಯುತ್ತದೆ. ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಇದನ್ನು ನಡೆಸುತ್ತದೆ. ಅದು ಕ್ಯಾಲೆಂಡರ್ ಸಿದ್ಧಪಡಿಸಿಕೊಂಡಿದ್ದು, ಅದರಂತೆ ಪ್ರತಿ ವರ್ಷ ಪರೀಕ್ಷೆ ನಡೆಸುತ್ತದೆ. ಫೆಬ್ರುವರಿ ತಿಂಗಳಲ್ಲಿ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಹಾಕಬೇಕು. ಯುಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಅದಕ್ಕೆ ಸಂಬಂಧಿಸಿದಂತೆ ಎಲ್ಲ ಮಾಹಿತಿ ಲಭ್ಯವಿದೆ. ಐಎಎಸ್, ಐಪಿಎಸ್, ಐಎಫ್‌ಎಸ್ ಈ ಮೂರೂ ನಾಗರಿಕ ಸೇವಾ ಪರೀಕ್ಷೆಗೆ ಒಂದೇ ಪೂರ್ವಭಾವಿ ಪರೀಕ್ಷೆ. ಐಎಫ್‌ಎಸ್ ಪರೀಕ್ಷೆಗೆ ವಿಜ್ಞಾನ ಪದವೀಧರರೇ ಆಗಿರಬೇಕು (ಮೆಡಿಕಲ್ ಹೊರತುಪಡಿಸಿ). ಪರೀಕ್ಷೆಗೆ ಸಂಬಂಧಿಸಿದ ವಿವರಗಳು **upsc.gov.in** ಜಾಲತಾಣದಲ್ಲಿ ಲಭ್ಯ.

**◆ ಐಎಎಸ್ ಅಧಿಕಾರಿಯಾಗಲಿರುವ ನಿಮ್ಮ ಸದ್ಯದ ಕನಸುಗಳೇನು?**

ನಾಗರಿಕ ಸೇವಾ ಕ್ಷೇತ್ರ ತುಂಬ ಸವಾಲುಗಳಿರುವ ವಲಯ. ನನ್ನ ಕೆಲಸ ಸಣ್ಣದಾದರೂ ಅದು ಪರಿಣಾಮಕಾರಿಯಾಗಿರಬೇಕು. ಕಚೇರಿಗೆ ಭೇಟಿ ನೀಡುವ ಎಲ್ಲರ ಕೆಲಸವೂ ಆಯಾ ದಿನವೇ ಮುಗಿಯಬೇಕು. ಕಚೇರಿಗೆ ಬಂದ ಕೊನೆಯ ವ್ಯಕ್ತಿಯ ಅಹವಾಲನ್ನು ಸಂಬಂಧಪಟ್ಟವರು ಕೇಳುವ ತನಕ ಇಲಾಖೆ ಕೆಲಸ ಮಾಡಬೇಕು. ಯಾವುದೇ ಇಲಾಖೆ ಆದರೂ ಇದೇ ಮಾದರಿಯಲ್ಲಿ ಕೆಲಸ ಮಾಡುತ್ತೇನೆ.

**◆ ಮಹಿಳೆಯರ ಸ್ಪರ್ಧೆಯನ್ನು ಹೆಚ್ಚು ಬಯಸುತ್ತಿದ್ದೀರಿ, ಇದಕ್ಕೆ ಪ್ರೇರಣೆ ಏನು?**

ಯುಪಿಎಸ್‌ಸಿಯಲ್ಲಿ ಮಹಿಳೆಯರಿಗೆಂದು ಮೀಸಲಾತಿ ಇಲ್ಲ. ಪುರುಷ–ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಲಾಗಿದೆ. ಈ ಬಾರಿ ಸುಮಾರು ಏಳು ನೂರು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಅದರಲ್ಲಿ ಮಹಿಳೆಯರ ಪಾಲು ಕೇವಲ 182. ಪ್ರಾತಿನಿಧ್ಯ ಸಮ ಪ್ರಮಾಣದಲ್ಲಿ ಇಲ್ಲ. ರಾಜ್ಯದಲ್ಲಿಯೇ ನೋಡುವುದಾದರೆ, 28 ಜನ ಆಯ್ಕೆಯಾಗಿದ್ದೇವೆ. ನಾಲ್ವರು ಮಾತ್ರ ಮಹಿಳೆಯರು. ಸಮಾನ ಅವಕಾಶ ಇದ್ದಾಗ ಸಮಾನ ಪಾಲು ಪಡೆಯುವ ಪ್ರಯತ್ನ ಬೇಕು. ಹೆಣ್ಣುಮಕ್ಕಳಿಗೆ ಈ ಬಗ್ಗೆ ಜಾಗೃತಿ ಕಡಿಮೆ. ಮನೆಯಲ್ಲಿಯೂ ನಿರೀಕ್ಷಿತ ಪ್ರೋತ್ಸಾಹ ಸಿಗಲಾರದು. ಭಾರತೀಯ ಸಮಾಜದಲ್ಲಿ ಹೆಣ್ಣುಮಕ್ಕಳ ಮದುವೆ ಮಾಡುವುದೇ ಪೋಷಕರ ದೊಡ್ಡ ಜವಾಬ್ದಾರಿ ಎಂದು ಬಹುತೇಕರು ಭಾವಿಸಿದ್ದಾರೆ. ಅದೊಂದೇ ಗುರಿಯಲ್ಲ ಎನ್ನುವ ಜಾಗೃತಿ ಇನ್ನೂ ಮೂಡಬೇಕಿದೆ. ಮದುವೆಯ ನಂತರವೂ ಸಾಧಿಸುವ ಮನಸ್ಸಿದ್ದರೆ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬಹುದು. ಕಳೆದ ವರ್ಷ ಯುಪಿಎಸ್‌ಸಿಯಲ್ಲಿ ಎರಡನೇ ರ‍್ಯಾಂಕ್ ಪಡೆದವರು ಮದುವೆ ಆಗಿದ್ದ ಮಹಿಳೆ.

**◆ ನಿಮ್ಮ ವೈಯಕ್ತಿಕ ಪರಿಚಯವನ್ನು ಹೇಳಿ.**

ಅಪ್ಪ ನಾಗಪ್ಪನ್. ಸ್ವ ಉದ್ಯೋಗಿ. ಅಮ್ಮ ದೇವಯಾನಿ ಗೃಹಿಣಿ. ನನ್ನ ಕನಸನ್ನು ಅಪ್ಪ ಬೆಂಬಲಿಸಿದರು. ಅಮ್ಮ ನಿತ್ಯವೂ ಪ್ರೋತ್ಸಾಹದ ಮಾತುಗಳನ್ನೇ ಆಡುತ್ತಿದ್ದರು. ಎಲ್ಲರಂತೆ ನನಗೂ ಮದುವೆಯ ಒತ್ತಡ ಇತ್ತು. ಸಂಪಾದನೆಯ ಅನಿವಾರ್ಯತೆಯೂ ಇತ್ತು. ಅವೆಲ್ಲವನ್ನು ಮೀರಿ ಸ್ವಪ್ರಯತ್ನದಿಂದ ಯಶಸ್ಸು ಗಳಿಸಿದೆ. ■



**◆ ಗ್ರಾಮೀಣ ಪ್ರದೇಶದ ಅಭ್ಯರ್ಥಿಯೊಬ್ಬ ಪರೀಕ್ಷಾ ಸಿದ್ಧತೆಯನ್ನು ಹೇಗೆ ಮಾಡಿಕೊಳ್ಳಬೇಕು?**

ಗ್ರಾಮೀಣ ಪ್ರದೇಶದವರಿಗೆ ತರಬೇತಿಯ ಕೊರತೆ ಕಾಣಿಸಬಹುದು. ಆದರೆ ತರಬೇತಿಯ ಅಗತ್ಯ ಇಲ್ಲ ಎಂದು ನನ್ನ ಅನುಭವದಿಂದ ಹೇಳುತ್ತೇನೆ. ಈಗ ಎಲ್ಲರ ಹತ್ತಿರ ಸ್ಮಾರ್ಟ್ ಫೋನ್ ಇದೆ. ಯುಪಿಎಸ್‌ಸಿ ಪರೀಕ್ಷಾ ಸಿದ್ಧತೆಗೆ ಉಚಿತವಾಗಿ ಅಧ್ಯಯನ ಮಾಡಲು ಸಾಕಷ್ಟು ವೆಬ್‌ಸೈಟ್‌ಗಳು ಇವೆ. ಅಲ್ಲಿ ಅನೇಕ ತರಬೇತಿ ಸಂಸ್ಥೆಗಳು ಸಹ ತಮ್ಮ ಪಠ್ಯವನ್ನು ಹಾಕುತ್ತವೆ. ಫ್ಲಿಪ್‌ಕಾರ್ಟ್–ಅಮೆಜಾನ್ ಮೂಲಕ ನಮಗೆ ಬೇಕಾದ ಪುಸ್ತಕಗಳನ್ನು ಇದ್ದಲ್ಲಿಗೆ ತರಿಸಿಕೊಳ್ಳಬಹುದು. ಪ್ರತಿವಾರ ಸರಣಿ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಾವು ಇದ್ದಲ್ಲಿಂದಲೇ ಬರೆಯಬಹುದು. ಎಲ್ಲ ಸೌಲಭ್ಯ ನಾವು ಕುಳಿತ ಸ್ಥಳದಲ್ಲಿಯೇ ಲಭ್ಯ ಇರುವ ಹೊತ್ತಿನಲ್ಲಿ ಬೆಂಗಳೂರು, ದೆಹಲಿಗೆ ಹೋಗಬೇಕಾದ ಅಗತ್ಯ ಇಲ್ಲ.

